

ಕಿರಿದಾದ ಬೀದಿಗಳಲ್ಲಿ ಇಲ್ಲಿ ಮನೆಗಳನ್ನು ಕಟ್ಟಿ ಕಟ್ಟಿ ತುರುಕಿದ್ದಾರೆ. ಅಲ್ಲಿಂದ ಟ್ರ್ಯಾಮ್ ಹಿಡಿಯಲೋ ಅಥವಾ ಬಸ್ ಹಿಡಿಯಲೋ ನೀವು ಕನಿಷ್ಠ ಅರ್ಧ ಕಿ.ಮೀ. ನಡೆಯಬೇಕು. ಟ್ರ್ಯಾಮ್ ಇಳಿದು ಹೋಗಬೇಕಾದ ಸ್ಥಳಕ್ಕೆ ಮತ್ತೆ ನಡೆಯಬೇಕು. ಮತ್ತೆ ವಾಪಸ್ ಮನೆ ಸೇರುವಷ್ಟರಲ್ಲಿ ನೀವು ಕಡಿಮೆಯೆಂದರೂ 2 ಕಿ.ಮೀ. ನಡಿಗೆ ಮುಗಿಸಿರುತ್ತೀರಿ. 'ನಾವು ಆಲೂಗಡ್ಡೆ, ಚೀಸ್, ಮೀನು ಚೆನ್ನಾಗಿ ತಿನ್ನುತ್ತೇವೆ. ಅವುಗಳನ್ನು ಕರಗಿಸುವಷ್ಟು ನಡೆಯುತ್ತೇವೆ, ಸೈಕಲ್ ಹೊಡೆಯುತ್ತೇವೆ. ಹಾಗಾಗಿಯೇ ಜಗತ್ತಿನಲ್ಲಿ ನಾವೇ ಅತಿ ಎತ್ತರದ ವ್ಯಕ್ತಿಗಳು, ನಮ್ಮಲ್ಲಿ ಬೊಜ್ಜೂ ಕಡಿಮೆ' ಎಂದು ಒಬ್ಬ ಡಚ್ ಸ್ನೇಹಿತ ಹೇಳಿದ್ದು ನೆನಪಾಯಿತು.

ಆಮ್‌ಸ್ಟರ್‌ಡ್ಯಾಂನ ತುಂಬಾ ಕೆನಾಲ್‌ಗಳೇ ಕೆನಾಲ್‌ಗಳು. ನೀರಿನ ಕಾಲುವೆಗಳ ಪಕ್ಕದಲ್ಲಿಯೇ ಹೌಸ್ ಬೋಟ್‌ಗಳಿವೆ. ಬೋಟ್‌ನ ಮ್ಯೂಸಿಯಂ ಕೂಡ ಇದೆ. ಒಂದೂವರೆ ಗಂಟೆಯ ದೋಣಿಯ ಪ್ರಯಾಣವನ್ನು ಈ ಕಾಲುವೆಗಳಲ್ಲಿ ಮಾಡಬಹುದು. ಯೂರೋಪ್‌ನ ಬಹುತೇಕ ಕಡೆಗಳಲ್ಲಿರುವಂತೆ ಇಲ್ಲಿ ದೋಣಿಯಲ್ಲಿಯೂ ಗೈಡ್‌ನಿಂದ ಆಸಕ್ತಿಪೂರ್ಣವಾದ ಮಾತು–ವಿವರಣೆ ಸಾಗುತ್ತದೆ. ಸುಮಾರು 100 ಕಿ.ಮೀ. ಮೀರಿದ ವಿವಿಧ ಕಾಲುವೆಗಳಿಂದ ಇಡೀ ಪಟ್ಟಣ ಕೂಡಿದೆ. 1500 ಸೇತುವೆಗಳಿವೆ. ಈ ಕಾಲುವೆಗಳನ್ನು ಪಟ್ಟಣ ಕಟ್ಟುವಾಗಲೇ ರೂಪಿಸಲಾಗಿದೆ. ಇದು ಪ್ರಸ್ತುತ ಯುನೆಸ್ಕೋ ವಿಶ್ವ ಸಾಂಸ್ಕೃತಿಕ ತಾಣಗಳಲ್ಲೊಂದಾಗಿದೆ. ಉತ್ತರದ ವೆನಿಸ್, ಚಿಕ್ಕ ವೆನಿಸ್ ಹೀಗೆ ಹೆಸರಾಗಿದೆ.

ಕಾಲುವೆಗಳ ಸುತ್ತ ಕಣ್ಣು ಹಾಯಿಸಿದರೆ ನಮ್ಮ ಗಮನ ಸೆಳೆಯುವುದು ಎತ್ತರವಾದ ಮನೆಗಳ ವಾಸ್ತು. ಎರಡು ಕಟ್ಟಡಗಳ ಮಧ್ಯೆ ಕಿಂಚಿತ್ ಸ್ಥಳವೂ ಇರದಿರುವುದು. ಇದಕ್ಕೆ ಕಾರಣವೂ ಉಂಟು. ಇಲ್ಲಿ ಮೊದಲು ತೆರಿಗೆ ಹಾಕುತ್ತಿದ್ದದ್ದು ಮನೆಗಳ ಅಗಲ ಎಷ್ಟಿದೆ ಎನ್ನುವುದರ ಆಧಾರದ ಮೇಲೆ. ಹಾಗಾಗಿಯೇ ಜನ ಮಹಡಿ ಕಟ್ಟಿ, ಕಡಿಮೆ ಜಾಗ ಬಳಸುವುದನ್ನು ಕಲಿತರು! ಹೆಚ್ಚಿನ ಹಳೆಯ ಕಟ್ಟಡಗಳಲ್ಲಿ 'ಲಿಫ್ಟ್' ಇಲ್ಲ. ಎಲ್ಲವೂ ಜಾಗ ಉಳಿಸುವ ಉಪಾಯವೇ. ಹಾಗೆಯೇ ಪ್ರಾಚೀನ ಮನೆಗಳು ಪೂರ್ತಿ ಮರದಿಂದ ನಿರ್ಮಾಣವಾಗುತ್ತಿದ್ದವು. ಆದರೆ ಬೆಂಕಿಯ ಅನಾಹುತದಿಂದಾಗಿ ಅವು ನಾಶವಾದ ನಂತರ ಕಲ್ಲಿನ–ಸಿಮೆಂಟಿನ ಮನೆಗಳು ಅಸ್ತಿತ್ವಕ್ಕೆ ಬಂದವು. ಎತ್ತರದ ಈ ಮನೆಗಳ ತುದಿಗೆ ಒಂದೊಂದು ಗಟ್ಟಿ ಕಬ್ಬಿಣದ ಕೊಕ್ಕೆ! ಸುಲಭವಾಗಿ ಸಾಮಾನುಗಳನ್ನು ಸಾಗಿಸಲು ಈ ಕೊಕ್ಕೆಗಳ ಉಪಾಯ.

ಬೆಂಕಿ, ನೀರು (ಪ್ರವಾಹ) ಹಾಗೂ ಪ್ಲೇಗ್ ಈ ಮೂರೂ ಆಮ್‌ಸ್ಟರ್‌ಡ್ಯಾಂನ ಶತ್ರುಗಳು. ಈ ಮೂರರಿಂದ ಹಿಂದೆ ಆದ ಅನಾಹುತ ನೆನಪಿಸಲು ನಮ್ಮ ಲಾಂಛನದಲ್ಲಿ ಮೂರು 'ಕ್ರಾಸ್' ಗಳು ಇವೆ ಎಂದು ಗೈಡ್ ವಿವರಿಸಿದ.

'ಆಮ್‌ಸ್ಟರ್‌ಡ್ಯಾಂ'ನಲ್ಲಿ ತತ್‌ಕ್ಷಣ ಕಾಣುವ, ಬೆರಗು–ಗಾಬರಿಗಳನ್ನು ಮೂಡಿಸುವ ಎರಡು ವಿಶೇಷಗಳಿವೆ. ಒಂದು, ಸುಂದರ 'ಟ್ಯೂಲಿಪ್' ಹೂವುಗಳು. ನಾವು ಹೋದದ್ದು ಚಳಿಗಾಲದಲ್ಲಿ. ನೀವು ಟ್ಯೂಲಿಪ್ ಹೂಗಳ ರಾಶಿರಾಶಿಯನ್ನು ನೋಡಬೇಕೆಂದರೆ ಹೋಗಬೇಕಾದ್ದು ಏಪ್ರೀಲ್‌ನಿಂದ ಆಗಸ್ಟ್ ತಿಂಗಳವರೆಗೆ. ಆದರೂ ಯಾವ ಕಾಲದಲ್ಲಿಯೂ ಬಣ್ಣ ಬಣ್ಣದ 'ಟ್ಯೂಲಿಪ್' ಹೂಗಳನ್ನು ನೋಡಬಹುದು. 'ಫ್ಲವರ್ ಮಾರ್ಕೆಟ್' ಎಂಬ ಹೂಗಳ

